## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗಾಗಿ ನಿಯೋಜಿಸಲು ಆದೇಶಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 502 ಬಿಎಂಎಸ್ 2015, ಬೆಂಗಳೂರು ದಿನಾಂಕ: 29.05.2015.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಸಲ್ಲಿಸಿರುವ ಏಕ ಕಡತ ಪ್ರಸ್ತಾವನೆ ಸಂಖ್ಯೆ: ಹಿಂವಕಇ/ತರಬೇತಿ/ಪ.ಪೂ.ತ/ಸಿಆರ್–23/2015–16, ದಿನಾಂಕ: 22–09–2015.

********

**ಪ್ರಸ್ತಾವನೆ:**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ 2011–12ನೇ ಸಾಲಿನಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಯನ್ನು ವಿವಿಧ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಭ್ಯರ್ಥಿಗಳಿಗೆ ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿ ನೀಡಲು ಅರ್ಹ ತರಬೇತಿ ಸಂಸ್ಥೆಗಳಿಂದ ಇ-ಟೆಂಡರ್ ಮೂಲಕ expression of interest ಅನ್ನು ಆಹ್ವಾನಿಸುವ ಬಗ್ಗೆ ಟೆಂಡರ್ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (2) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿ, ಇ–ಟೆಂಡರ್ ಮೂಲಕ expression of interest ಅನ್ನು ವ್ಯಕ್ತಪಡಿಸಿರುವ 14 ಸಂಸ್ಥೆಗಳಲ್ಲಿ 8 ತರಬೇತಿ ಸಂಸ್ಥೆಗಳು ಅರ್ಹತೆಯನ್ನು ಹೊಂದಿದ್ದು, ಈ ತರಬೇತಿ ಸಂಸ್ಥೆಗಳು ದರ ಸಂಧಾನ ಸಭೆಯಲ್ಲಿ ತರಬೇತಿ ಶುಲ್ಕವನ್ನು ಕಡಿಮೆ ಮಾಡಲು ಒಪ್ಪಿರುವುದರಿಂದ ಹಿಂದುಳಿದ ವರ್ಗಗಳ 500 ಅಭ್ಯರ್ಥಿಗಳನ್ನು ಸದರಿ 8 ತರಬೇತಿ ಸಂಸ್ಥೆಗಳಿಗೆ ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗಾಗಿ ನಿಯೋಜಿಸುವ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯು 1091 ಬಿಎಂಎಸ್ 2015, ದಿನಾಂಕ: 24.09.2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ಹಿಂದುಳಿದ ವರ್ಗಗಳ 500 ಅಭ್ಯರ್ಥಿಗಳನ್ನು ಈ ಕೆಳಗಿನ ತರಬೇತಿ ಸಂಸ್ಥೆಗಳಿಗೆ ಕೆಳಕಂಡ ನಿಬಂಧನೆಗಳಿಗೊಳಪಟ್ಟು ನಿಯೋಜಿಸಲು ಆದೇಶಿಸಿದೆ.

(ರೂ.ಗಳಲ್ಲಿ)

| ಕ್ರ. ಸಂ. | ತರಬೇತಿ ಸಂಸ್ಥೆಯ ಹೆಸರು | ನಿಯೋಜಿಸಿರುವ ಅಭ್ಯರ್ಥಿಗಳ ಸಂಖ್ಯೆ | ಪ್ರತಿ ಅಭ್ಯರ್ಥಿಗೆ ನಿಗದಿಪಡಿಸಿರುವ ತರಬೇತಿ ಶುಲ್ಕ | | | ಪ್ರತಿ ಅಭ್ಯರ್ಥಿಗೆ ಮಾಸಿಕ ತರಬೇತಿ ಭತ್ಯೆ |
|---|---|---|---|---|---|---|
| | | | ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ (ಜನರಲ್ ಸ್ಟಡೀಸ್ ಮತ್ತು ಸಿಸ್ಯಾಟ್) | ಒಂದು ಐಚ್ಛಿಕ ವಿಷಯ | ಒಟ್ಟು | |
| *1* | *2* | *3* | *4* | *5* | *6* | *7* |
| 1 | ವಾಜಿರಾಂ & ರವಿ, ನವದೆಹಲಿ | 75 | 122000 | 38000 | 160000 | 8000 |
| 2 | ಆಲ್ಟರ್ನೇಟಿವ್ ಲರ್ನಿಂಗ್ ಸಿಸ್ಟಮ್ಸ್ ಪ್ರೈ. ಲಿ. ನವದೆಹಲಿ | 75 | 122000 | 38000 | 160000 | |
| 3 | ಶ್ರೀರಾಮ್ಸ್ ಐಎಎಸ್, ನವದೆಹಲಿ | 75 | 122000 | 38000 | 160000 | |
| 4 | ಬ್ರೈನ್ ಟ್ರೀ, ಹೈದರಾಬಾದ್ | 50 | 75000 | 30000 | 105000 | 6000 |
| 5 | ಆರ್.ಸಿ.ರೆಡ್ಡಿ ಐಎಎಸ್ ಸ್ಟಡಿ ಸರ್ಕಲ್, ಹೈದರಾಬಾದ್ | 50 | 75000 | 30000 | 105000 | |
| 6 | ಯೂನಿವರ್ಸಲ್ ಕೋಚಿಂಗ್ ಸೆಂಟರ್, ಬೆಂಗಳೂರು | 75 | 65000 | 20000 | 85000 | ಸ್ಥಳೀಯ ಅಭ್ಯರ್ಥಿಗಳಿಗೆ 2000 ಮತ್ತು ಹೊರ ಜಿಲ್ಲೆಯ ಅಭ್ಯರ್ಥಿಗಳಿಗೆ 4000 |
| 7 | ಸ್ಪರ್ಧಾ ಚೈತ್ರ, ಬೆಂಗಳೂರು | 50 | 65000 | 20000 | 85000 | |
| 8 | ಜಿನೇಂದ್ರ ಇನ್ಸ್ಟಿಟ್ಯೂಟ್ ಆಫ್ ಕಾಂಪಿಟೇಟಿವ್ ಎಗ್ಸಾಮ್ಸ್ (JICE), ಬೆಂಗಳೂರು | 50 | 65000 | 20000 | 85000 | |
| | ಒಟ್ಟು | 500 | | | | |

<u>**ಷರತ್ತುಗಳು:**</u>

1. ಮೇಲ್ಕಾಣಿಸಿದ ಯಾವುದಾರೂ ತರಬೇತಿ ಸಂಸ್ಥೆಯು ಅನಿವಾರ್ಯ ಕಾರಣಗಳಿಂದ ತರಬೇತಿ ನೀಡಲು ಸಾಧ್ಯವಾಗದಿದ್ದಲ್ಲಿ ಅಥವಾ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಯಾವುದಾರೂ ತರಬೇತಿ ಸಂಸ್ಥೆಯನ್ನು ಆಯ್ಕೆ ಮಾಡದೇ, ತರಬೇತಿ ಸಂಸ್ಥೆಗೆ ಹಂಚಿಕೆ ಮಾಡಿರುವ ಸ್ಥಾನಗಳು ಉಳಿಕೆಯಾದಲ್ಲಿ, ಆ ಉಳಿಕೆ ಸ್ಥಾನಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಹಂತದಲ್ಲಿ ಪ್ರದೇಶವಾರು ತರಬೇತಿ ಸಂಸ್ಥೆಗಳಿಗೆ ಮರುಹಂಚಿಕೆ ಮಾಡಿಕೊಳ್ಳುವುದು.

2. ತರಬೇತಿ ನೀಡಲು ಆಯ್ಕೆಯಾಗಿರುವ ಸಂಸ್ಥೆಗಳೊಂದಿಗೆ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ತರಬೇತಿಯ ಷರತ್ತುಗಳ ಬಗ್ಗೆ ಕರಾರು ಮಾಡಿಕೊಳ್ಳತಕ್ಕದ್ದು.
3. ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಹಾಗೂ ಮೀಸಲಾತಿಯನ್ವಯ ಕೌನ್ಸಿಲಿಂಗ್ ಮೂಲಕ ಅಭ್ಯರ್ಥಿಗಳನ್ನು ಪರೀಕ್ಷಾ ಪೂರ್ವ ತರಬೇತಿಗೆ ಆಯ್ಕೆ ಮಾಡುವುದು.
4. ಪರೀಕ್ಷಾ ಪೂರ್ವ ತರಬೇತಿಗೆ ಅಭ್ಯರ್ಥಿಗಳನ್ನು ನಿಯೋಜಿಸುವಾಗ ಈ ಕೆಳಗಿನ ಮೀಸಲಾತಿ ಅನುಪಾತವನ್ನು ಕಾಯ್ದುಕೊಳ್ಳುವುದು.

| ಕ್ರ. ಸಂ. | ಪ್ರವರ್ಗ | ಶೇಕಡ |
|---|---|---|
| 1 | 1 | 15% |
| 2 | 2ಎ | 53% |
| 3 | 3ಎ | 15% |
| 4 | 3ಬಿ | 17% |
| | ಒಟ್ಟು | 100.% |

5. ಯಾವುದೇ ಪ್ರವರ್ಗದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಉಳಿಕೆಯಾಗುವ ಸ್ಥಾನಗಳನ್ನು ಮೀಸಲಾತಿಯನ್ವಯ ಉಳಿದ ಪ್ರವರ್ಗಗಳಿಗೆ ಹಂಚಿಕೆ ಮಾಡುವುದು.
6. ಪ್ರತಿ ಪ್ರವರ್ಗದಲ್ಲಿ ಶೇ.33 ರಷ್ಟು ಮಹಿಳಾ ಅಭ್ಯರ್ಥಿಗಳು ಹಾಗೂ ಶೇ.3 ರಷ್ಟು ವಿಕಲ ಚೇತನ ಅಭ್ಯರ್ಥಿಗಳನ್ನು ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ನಿಯೋಜಿಸುವುದು.
7. ಪ್ರತಿ ತರಬೇತಿ ಸಂಸ್ಥೆಗೆ ಪ್ರವರ್ಗವಾರು ಮೀಸಲಾತಿಯನ್ವಯ ಅಭ್ಯರ್ಥಿಗಳನ್ನು ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ನಿಯೋಜಿಸುವುದು.
8. ಯಾವುದಾದರೂ ಪ್ರವರ್ಗದಲ್ಲಿ ಮಹಿಳಾ ಮತ್ತು ವಿಕಲ ಚೇತನ ಅಭ್ಯರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ ಉಳಿಕೆ ಸ್ಥಾನಗಳಿಗೆ ಅದೇ ಪ್ರವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.
9. ತರಬೇತಿ ಸಂಸ್ಥೆಗಳು ಐ.ಎ.ಎಸ್. ಪರೀಕ್ಷಾ ಪೂರ್ವ ತರಬೇತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಯ ಸಾಮಾನ್ಯ ಅಧ್ಯಯನ, ಸಿಸ್ಯಾಟ್ ಹಾಗೂ ಒಂದು ಐಚ್ಛಿಕ ವಿಷಯವನ್ನು ಒಳಗೊಂಡಂತೆ ಕನಿಷ್ಠ 7 ರಿಂದ ಗರಿಷ್ಠ 9 ತಿಂಗಳ ಅವಧಿಯಲ್ಲಿ ಸಮಗ್ರ ತರಬೇತಿಯನ್ನು ನೀಡುವುದು.
10. ತರಬೇತಿ ಸಂಸ್ಥೆಗಳು ಕಡ್ಡಾಯವಾಗಿ ಬಯೋಮೆಟ್ರಿಕ್ ಹಾಜರಾತಿಯನ್ನು ನಿರ್ವಹಿಸಿ, ಹಾಜರಾತಿ ವರದಿಯನ್ನು ಪ್ರತಿ ತಿಂಗಳು ಮುಕ್ತಾಯಗೊಂಡ ನಂತರ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸುವುದು.
11. ಅಭ್ಯರ್ಥಿಗಳ ಹಾಜರಾತಿ ಅನ್ವಯ ಮಾಸಿಕ ತರಬೇತಿ ಭತ್ಯೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಭ್ಯರ್ಥಿಗಳಿಗೆ ಪಾವತಿಸುವುದು. ಅಭ್ಯರ್ಥಿಗಳು ಒಂದು ತಿಂಗಳ ತರಬೇತಿಯ ಅವಧಿಯಲ್ಲಿ 3 ದಿನಗಳಿಗಿಂತ ಹೆಚ್ಚಿನ ಅವಧಿಗೆ ಗೈರು–ಹಾಜರಾದಲ್ಲಿ, ಆ ಅವಧಿಗೆ ತರಬೇತಿ ಭತ್ಯೆಯನ್ನು ಕಡಿತಗೊಳಿಸುವುದು.

12. ತರಬೇತಿ ಆರಂಭವಾದ 3 ತಿಂಗಳ ಬಳಿಕ ತರಬೇತಿ ಶುಲ್ಕದ ಶೇ.50 ರಷ್ಟನ್ನು ಹಾಗೂ ತರಬೇತಿ ಮುಕ್ತಾಯಗೊಂಡ ನಂತರ ಬಾಕಿ ಶೇ.50 ರಷ್ಟನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ತರಬೇತಿ ಸಂಸ್ಥೆಗಳಿಗೆ ಅನುದಾನ ಲಭ್ಯತೆಯನ್ನಾಧರಿಸಿ ಪಾವತಿಸುವುದು.
13. ತರಬೇತಿ ಮುಕ್ತಾಯಗೊಂಡ ಬಳಿಕ ತರಬೇತಿ ಸಂಸ್ಥೆಗಳು ತರಬೇತಿ ಪೂರ್ಣಗೊಂಡಿರುವ ಬಗ್ಗೆ ವರದಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸುವುದು.
14. ತರಬೇತಿಯನ್ನು ಮಧ್ಯಂತರದಲ್ಲಿ ಬಿಟ್ಟು ಹೋಗುವ ಅಭ್ಯರ್ಥಿಗಳಿಂದ, ಸರ್ಕಾರವು ಅವರ ತರಬೇತಿಗೆ ಮಾಡಿರುವ ಖರ್ಚು ವೆಚ್ಚವನ್ನು ವಸೂಲಾತಿ ಮಾಡುವುದು.
15. ಮುಖ್ಯ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗೆ ಮೌಖಿಕ ಸಂದರ್ಶನದ ಸಮಯದಲ್ಲಿ ಉಚಿತ ತರಬೇತಿ ಹಾಗೂ ಮಾರ್ಗದರ್ಶನವನ್ನು ತರಬೇತಿ ಸಂಸ್ಥೆಗಳು ನೀಡತಕ್ಕದ್ದು.
16. ನಿಯೋಜಿಸಲ್ಪಟ್ಟ ತರಬೇತಿ ಸಂಸ್ಥೆಗೆ ಸ್ವಂತ ಸ್ಥಳದಿಂದ ಒಂದು ಬಾರಿ ಹೋಗಿ ಬರಲು ದ್ವಿತೀಯ ದರ್ಜೆ (ಸ್ಲೀಪರ್) ರೈಲ್ವೆ ಪ್ರಯಾಣ ವೆಚ್ಚವನ್ನು ಅಭ್ಯರ್ಥಿಗಳಿಗೆ ನೀಡತಕ್ಕದ್ದು. ರೈಲ್ವೆ ಸಂಪರ್ಕವಿಲ್ಲದ ಕಡೆಗೆ ಸಾಮಾನ್ಯ ಬಸ್ ಪ್ರಯಾಣದ ವಾಸ್ತವ ದರವನ್ನು ನೀಡುವುದು.
17. ಸದರಿ ಆದೇಶವು 2017-18ನೇ ಸಾಲಿನ ವರೆಗೆ ಚಾಲ್ತಿಯಲ್ಲಿರುತ್ತದೆ.

ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ರಾಜ್ಯವಲಯ ಯೋಜನೆ **ಲೆಕ್ಕ ಶೀರ್ಷಿಕೆ** 2225-03-277-2-37 **ರಡಿ ಭರಿಸತಕ್ಕದ್ದು.**

ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸಂಬಂಧಿಸಿದ ತರಬೇತಿ ಸಂಸ್ಥೆಗಳಿಗೆ.
5. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.